

# ಚಿನ್ನದ ಪದಕ

ಆತನ ಹೆಸರು ಬಿಲ್ ಹೆವೆನ್ಸ್. ವರ್ಷಗಟ್ಟಲೇ ದೋಣಿ ಚಾಲನೆ ತರಬೇತಿ ಪಡೆದಿದ್ದ. ಅದರಲ್ಲಿ ನಿಪುಣತೆಯನ್ನು ಪಡೆದು, ಒಲಿಂಪಿಕ್ಸ್ ಸ್ಪರ್ಧೆಯ ತಂಡಕ್ಕೂ ಆಯ್ಕೆಯಾಗಿದ್ದ. ಆ ವರ್ಷ 1924ರ ಒಲಿಂಪಿಕ್ಸ್ ಸ್ಪರ್ಧೆಗಳು ಪ್ಯಾರಿಸ್‌ನಲ್ಲಿ ನಡೆಯಲಿದ್ದವು. ಆ ತಂಡ ಚಿನ್ನದ ಪದಕ ಗೆಲ್ಲುವ ಭರವಸೆಯನ್ನು ಹೊಂದಿತ್ತು.

ಆ ಸಂದರ್ಭದಲ್ಲಿ ಬಿಲ್ ಸಂದಿಗ್ಧತೆಗೆ ತುತ್ತಾದ. ಕಾರಣ ಆತನ ಹೆಂಡತಿ ಚೊಚ್ಚಲು ಬಸುರಿಯಾಗಿದ್ದಳು. ಹೆರಿಗೆಯ ಸಮಯ, ಒಲಿಂಪಿಕ್ಸ್ ಸ್ಪರ್ಧೆಯಲ್ಲಿ ಭಾಗವಹಿಸಲು ಹೋಗುವುದೋ? ಹೆರಿಗೆಯ ಸಮಯದಲ್ಲಿ ಹೆಂಡತಿಯೊಂದಿಗೆ ಉಳಿಯುವುದೋ? ಯೋಚಿಸತೊಡಗಿದ. ಈಗಿನಂತೆ ಆಗ ಜೆಟ್ ವಿಮಾನಗಳಿರಲಿಲ್ಲ. ಹಡಗಿನಲ್ಲಿ ತಿಂಗಳಾನುಗಟ್ಟಲೇ ಪ್ರಯಾಣ ಮಾಡಬೇಕಾಗಿತ್ತು. ಹೆಂಡತಿ ನನ್ನದು ಹೇಗೋ ಆಗುತ್ತದೆ. ಅವಕಾಶ ಕಳೆದುಕೊಳ್ಳಬೇಡಿ ಹೋಗಿ ಬನ್ನಿ ಎಂದಳು. ಬಿಲ್ ಒಪ್ಪಲಿಲ್ಲ. ಕೊನೆಗೆ ಹೆಂಡತಿಯ ಜೊತೆಗೆ ಇರುವ ತೀರ್ಮಾನವನ್ನು ತೆಗೆದುಕೊಂಡ.

ಒಲಿಂಪಿಕ್ಸ್ ಸ್ಪರ್ಧೆಯ ತಂಡ ಪ್ಯಾರಿಸ್ ಹಾದಿ ಹಿಡಿಯಿತು. ಬಿಲ್ ಮಾತ್ರ ಹೋಗಲಿಲ್ಲ. ಅಂದುಕೊಂಡಂತೆ ತಂಡಕ್ಕೆ ಚಿನ್ನದ ಪದಕ ದೊರೆಯಿತು. ಬಿಲ್ ಹೆಂಡತಿಗೆ ಇನ್ನೂ ಹೆರಿಗೆಯಾಗಿರಲಿಲ್ಲ. ಪ್ಯಾರಿಸ್‌ನಿಂದ ತಂಡ ಮರಳುವ ಹೊತ್ತಿಗೆ ಆಕೆ ಗಂಡು ಮಗುವಿಗೆ ಜನ್ಮವಿತ್ತಳು.

ಎಲ್ಲರೂ ಬಿಲ್ ತುಂಬ ತಪ್ಪು ಮಾಡಿದ ಎಂದು ಮಾತಾಡಿಕೊಂಡರು. ಕೆಲವರು ನಗೆಯಾಡಿದರು. ಆದರೆ ಬಿಲ್ ಪಶ್ಚಾತ್ತಾಪಪಡಲಿಲ್ಲ. ತನ್ನ ಕುಟುಂಬಕ್ಕಾಗಿ ತನ್ನ ಕರ್ತವ್ಯ ಪಾಲಿಸಿದ್ದೇನೆ ಎಂದು ಭಾವಿಸಿದ. ಇಂಥ ಗಂಡನನ್ನು ಪಡೆದ ಹೆಮ್ಮೆ ಹೆಂಡತಿಗೆ. ಮಗನಿಗೆ ಫ್ರ್ಯಾಂಕ್ ಹೆವೆನ್ಸ್ ಎಂದು ಹೆಸರಿಟ್ಟರು.

ಇದಾಗಿ ಇಪ್ಪತ್ತೆಂಟು ವರ್ಷಗಳು ಕಳೆದು ಹೋದವು. ಫಿನ್‌ಲೆಂಡಿನ ಹೆಲ್ಸಿಂಕಿಯಿಂದ 1952ರಲ್ಲಿ ಬಿಲ್‌ನಿಗೆ ಒಂದು ಟೆಲಿಗ್ರಾಂ ಬಂತು. ಮಗ ಫ್ರ್ಯಾಂಕ್ ಕಳಿಸಿದ್ದ : ಪ್ರೀತಿಯ ತಂದೆಯೇ, ನಾನು ಒಲಿಂಪಿಕ್ಸ್ ದೋಣಿ ಚಾಲನಾ ಸ್ಪರ್ಧೆಯಲ್ಲಿ ಚಿನ್ನದ ಪದಕ ಪಡೆದಿದ್ದೇನೆ. ನೀವು 1924ರಲ್ಲಿ ನಾನು ಹುಟ್ಟುವುದಕ್ಕಾಗಿ ಕಾಯುತ್ತ ಕುಳಿತು ಕಳೆದುಕೊಂಡ ಚಿನ್ನದ ಪದಕವನ್ನು ತರುತ್ತಿದ್ದೇನೆ.

ಬಿಲ್‌ನ ಮಗ ಫ್ರ್ಯಾಂಕ್, ಫಿನ್‌ಲೆಂಡಿನ ಹೆಲ್ಸಿಂಕಿಯಲ್ಲಿ ನಡೆದ ಒಲಿಂಪಿಕ್ಸ್ ದೋಣಿ ಚಾಲನಾ ಸ್ಪರ್ಧೆಯಲ್ಲಿ ಚಿನ್ನದ ಪದಕ ಪಡೆದಿದ್ದ. ಬಿಲ್ ತಾನು ಅಂದು ತಪ್ಪು ನಿರ್ಣಯ ತೆಗೆದುಕೊಳ್ಳಲಿಲ್ಲ ಎಂಬುದು ಮತ್ತೊಮ್ಮೆ ರುಜುವಾತಾಯಿತು ಎಂದು ಅಂದುಕೊಂಡ. ಬಿಲ್‌ನನ್ನು ದೂಷಿಸಿದ್ದ ಅದೇ ಜನ ಹೊಗಳತೊಡಗಿದರು. ತಂದೆ ಇದ್ದರೆ ಬಿಲ್ ನಂತಿರಬೇಕು; ಮಗ ಇದ್ದರೆ ಫ್ರ್ಯಾಂಕ್‌ನಂತಿರಬೇಕು.

■ ಪ್ರಕಾಶ ಎಸ್. ಮನ್ನಂಗಿ